ಆಯೋಗದ ವಿವಿಧ ನಿರ್ದೇಶನಾಲಯದಿಂದ ಹಂತಹಂತವಾಗಿ ಅನುಮೋದನೆ ಪಡೆಯಬೇಕಾಗಿರುವುದರಂತೆ, ಈ ದಿಸೆಯಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಸದರಿ ಯೋಜನೆಗೆ ಕೇಂದ್ರ ಜಲ ಆಯೋಗದಿಂದ ಅಂತಿಮ ತೀರುವಳಿಯನ್ನು ಪಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

4338 (4151) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ ರಂಗಾಯಣ ಸಂಸ್ಥೆಯ ಶಾಖೆ ಆರಂಭಕ್ಕೆ ಸರಕಾರ ಅನುಮತಿ ನೀಡಿದ್ದು ಯಾವಾಗ;

ಆ) ರಂಗಾಯಣ ಆರಂಭಕ್ಕೆ ಸರ್ಕಾರ ಇದುವರೆಗೂ ಬಿಡುಗಡೆ ಮಾಡಿರುವ ಹಣ ಎಷ್ಟು; ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;

ಇ) ರಂಗಾಯಣ ಆರಂಭಗೊಳ್ಳಲು ತಡವಾಗುತ್ತಿರುವುದಕ್ಕೆ ಕಾರಣಗಳೇನು;

ಈ) ಸರ್ಕಾರ ತಕ್ಷಣ ಧಾರವಾಡದಲ್ಲಿ ರಂಗಾಯಣ ಸಂಸ್ಥೆ ಆರಂಭಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ದಿನಾಂಕ : 02.09.2003 ರಂದು ಧಾರವಾಡದಲ್ಲಿ ರಂಗಾಯಣ ಸಂಸ್ಥೆಯ ಶಾಖೆ ಆರಂಭಕ್ಕೆ ಅನುಮತಿ ನೀಡಿದೆ.

ಆ) ಧಾರವಾಡದಲ್ಲಿ ರಂಗಾಯಣ ಶಾಖೆಯನ್ನು ಆರಂಭಿಸಲು 28 ಕುಂಟೆ ಪ್ರದೇಶವನ್ನು ರಂಗಾಯಣಕ್ಕೆ ನೀಡಲು 2003ರಲ್ಲಿ ತೀರ್ಮಾನಿಸಲಾಗಿರುತ್ತದೆ. ಧಾರವಾಡದ ರಂಗಾಯಣ ಶಾಖೆಯ ಕಚೇರಿಯೆನ್ನು ಒಳಗೊಂಡಂತೆ ಸುವರ್ಣ ಸಾಂಸ್ಕೃತಿಕ ಸಮುಚ್ಚಯವನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಪ್ರಸ್ತುತ ಕೈಗೊಂಡಿದ್ದು, ಈ ಉದ್ದೇಶಕ್ಕಾಗಿ ಧಾರವಾಡದ ಜಿಲ್ಲಾಧಿಕಾರಿಗಳಿಗೆ 2004ರಲ್ಲಿ ರೂ.10.00 ಲಕ್ಷಗಳನ್ನು ನೀಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣಕ್ಕಾಗಿ ಸುವರ್ಣ ಕರ್ನಾಟಕ ಯೋಜನೆಯಡಿ

ರೂ.50.00 ಲಕ್ಷಗಳನ್ನು ಹಂಚಿಕೆ ಮಾಡಿಕೊಳ್ಳಲಾಗಿದೆ. ಈ ಮೊತ್ತದ ಮಿತಿಯಲ್ಲಿ ಕೈಗೊಳ್ಳುವ ಕಾಮಗಾರಿಯ ಪ್ರಮಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳನ್ನು ಕೋರಲಾಗಿರುತ್ತದೆ. ಅವರಿಂದ ಸೂಕ್ತ ಪ್ರಸ್ತಾವನೆ ಬಂದ ಕೂಡಲೇ ಹಣವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಧಾರವಾಡದಲ್ಲಿ ರಂಗಾಯಣದ ಘಟಕವನ್ನು ಆರಂಭಿಸಲು ಸ್ಥಳಾವಕಾಶವನ್ನು ಸುವರ್ಣ ಸಾಂಸ್ಕೃತಿಕ ಸಂಕೀರ್ಣ ಸಮುಚ್ಛಯದಲ್ಲಿ ಮಾಡಿಕೊಂಡಿದ್ದು, ಈ ಕಾಮಗಾರಿಯನ್ನು ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸುತ್ತಿರುವುದರಿಂದ ಶಾಖೆಯ ಕಚೇರಿ ಪ್ರಾರಂಭವಾಗುವುದಕ್ಕೆ ತಡವಾಗಿರುತ್ತದೆ.

ಈ) ಅ) ಧಾರವಾಡದಲ್ಲಿ ರಂಗಾಯಣದ ಕಾರ್ಯ ಚಟುವಟಿಕೆಗೆಂದು ರೂ.2.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಈ ಮೊತ್ತದಲ್ಲಿ ರಂಗಾಯಣವು 2004ರಲ್ಲಿ ಚಿಣ್ಣರ ಮೇಳ-ಮಕ್ಕಳ ರಂಗತರಬೇತಿ ಶಿಬಿರವನ್ನು ನಡೆಸಿರುತ್ತಾರೆ.

ಆ) ಸುವರ್ಣ ಸಾಂಸ್ಕೃತಿಕ ಸಮುಚ್ಛಯ ನಿರ್ಮಾಣವಾದ ಕೂಡಲೇ ರಂಗಾಯಣದ ಕಾರ್ಯಚಟುವಟಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಲು ಸಂಸ್ಥೆಗೆ ಸೂಚಿಸಲಾಗುವುದು.

4339 (3811) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ. (ಬ್ರಹ್ಮಾವರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಬೆಂಗಳೂರಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ವಿವೇಚನೆಯಡಿ ವಿತರಿಸಿರುವ ನಿವೇಶನಗಳೆಷ್ಟು;

ಆ) ಈ ರೀತಿ ವಿವೇಚನೆಯಡಿ ನಿವೇಶನಗಳನ್ನು ನೀಡಲು ಇರುವ ಮಾನದಂಡವೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ದಿನಾಂಕ : 01/04/2002 ರಿಂದ 30/03/2005 ರವರೆಗೆ ಸರ್ಕಾರದ ವಿವೇಚನೆಯಡಿ "ಜಿ" ಪ್ರವರ್ಗದಲ್ಲಿ 305 ಬಿಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.